ಸಮಾಚಾರ ಸಣ್ಣದಲ್ಲ

14ನೇ ಮಹಡಿಯಿಂದ ಹಾರಿ ಮಹಿಳೆ ಆತ್ಮಹತ್ಯೆ

ಮಂಗಳೂರು : ಕುಲಶೇಖರ ವಸತಿ ಗೃಹದಲ್ಲಿದ್ದ ಮಹಿಳೆ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪುಷ್ಪಲತಾ ನಾಯಕ್ (64) ಆತ್ಮಹತ್ಯೆ ಮಾಡಿಕೊಂಡವರು. ಕುಲಶೇಖರ ಚೌಕಿ ಪ್ಲಾಮಾ ಗ್ರಾಂಡ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದ ಇವರು 14ನೇ ಮಹಡಿಯ ಮನೆಯ ಬಾಲ್ಕನಿ ಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಂಬೈನಲ್ಲಿ ಏರ್ ಪೋರ್ಟ್ ಮ್ಯಾನೇಜರ್ ಆಗಿ ನಿವೃತ್ತರಾಗಿದ್ದರು. ಹತ್ತು ವರ್ಷಗಳಿಂದ ಮಂಗಳೂ ರಿಗೆ ಬಂದು ನೆಲೆಸಿದ್ದರು. ಪುಷ್ಪಲತಾ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರು. ಅಲ್ಲದೇ ಈ ಹಿಂದೆಯೂ ಆತ್ಮಹತ್ಯೆಗೆ ಯತ್ನಿಸಿದ್ದರು ಎನ್ನಲಾಗಿದೆ. ಈ ಬಗ್ಗೆ ಕಂಕನಾಡಿ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಒಬ್ಬ ಮಗ ಸಿಂಗಾಪುರದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಇನ್ನೊಬ್ಬ ಮಗಳು ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಯಾವ ಕಾರಣಕ್ಕಾಗಿ ಘಟನೆ ನಡೆದಿದೆ ಎನ್ನುವುದು ತಿಳಿದುಬಂದಿಲ್ಲ.

ಶೇಖರ್ ಪದ್ದು ಬಂಗೇರ ಇನ್ನಿಲ್ಲ

ಉಡುಪಿ: ಭಾರತೀಯ ಫುಟ್‌ಬಾಲ್ ತಂಡದ ಮಾಜಿ ನಾಯಕ ಶೇಖರ್ ಪದ್ದು ಬಂಗೇರ (74) ಅವರು ಗುರುವಾರ ಕರೋನಾಗೆ ಬಲಿಯಾಗಿದ್ದಾರೆ. ಇತ್ತೀಚೆಗೆ ಸೋಂಕು ತಗುಲಿತ್ತು. ಚಿಕಿತ್ಸೆಗಾಗಿ ಬ್ರಹ್ಮಾವರದ ಮಹೇಶ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದಿದ್ದಾರೆ. ಗುರುವಾರ ಉಡುಪಿಯಲ್ಲೇ ಅಂತ್ಯಕ್ರಿಯೆ ನೆರವೇರಲಿದೆ. ಉಡುಪಿಯ ಬಡಾನಿಡಿಯೂರು ಮೂಲದ ಶೇಖರ್ ಪದ್ದು ಬಂಗೇರ ಅವರು ಭಾರತ ಫುಟ್‌ಬಾಲ್ ತಂಡದಲ್ಲಿ ಗೋಲ್ ಕೀಪರ್, ಕ್ಯಾಪ್ಟನ್ ಆಗಿದ್ದರು.

ಆಸಾರಾಂಗೆ ಜಾಮೀನು ಕೊಡಬೇಡಿ: ಮನವಿ

ದೆಹಲಿ: ಅತ್ಯಾಚಾರ ಆರೋಪಿ, ಸ್ವಯಂಘೋಷಿತ ದೇವಮಾನವ ಆಸಾರಾಂ ಬಾಪುವಿಗೆ ಸುಪ್ರೀಂಕೋರ್ಟ್ ಜಾಮೀನು ನೀಡಿಕೆ ವಿರೋಧಿಸಿ, ಅತ್ಯಾಚಾರಕ್ಕೊಳಗಾದ ಮಗುವಿನ ತಂದೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಆಸಾರಾಂ ಜಾಮೀನಿನ ಮೇಲೆ ಬಿಡುಗಡೆಯಾದರೆ ಆತನ ಅನುಯಾಯಿಗಳು ಅಥವಾ ಆತನ ಆಪ್ತರು ನನ್ನ ಮಗು ಮತ್ತು ನನ್ನ ಕುಟುಂಬವನ್ನು ಕೊಲ್ಲಬಹುದು ಎಂದು ಸಂತ್ರಸ್ತೆಯ ತಂದೆ ಆತಂಕ ತೋಡಿಕೊಂಡಿದ್ದಾರೆ. ಆಸಾರಾಂ ಬಾಪು ಹೆಚ್ಚು ಪ್ರಭಾವಶಾಲಿ ಮತ್ತು ರಾಜಕೀಯ ನಂಟು ಹೊಂದಿದ್ದಾನೆ. ದೇಶದಾದ್ಯಂತ ಲಕ್ಷಾಂತರ ಅಂಧ ಅನುಯಾಯಿಗಳ ಬಲವನ್ನು ಆತ ಹೊಂದಿದ್ದಾನೆ. ಪ್ರತ್ಯಕ್ಷದರ್ಶಿ ಸಾಕ್ಷಿಗಳ ಮೇಲೆ ಹಲ್ಲೆ ನಡೆಸಿ ಕೊಲ್ಲಲು ಕಾರ್ತಿಕ್ ಹಲ್ದಾನರ್‌ನ್ನು ಆಸಾರಾಂ ನೇಮಿಸಿದ್ದ. ಇದನ್ನು ಕಾರ್ತಿಕ್ ಪೊಲೀಸರ ಎದುರು ತಪ್ಪೊಪ್ಪಿಕೊಂಡಿದ್ದಾನೆ ಎಂದು ಉಲ್ಲೇಖಿಸಿದ್ದಾರೆ.

ಸ್ಮಾರ್ಟ್‌ಫೋನ್ ಇಲ್ಲದವರಿಗೂ ಲಸಿಕೆ

ದೆಹಲಿ: ನೋಂದಣಿ ಮಾಡದಿದ್ದರೂ ವ್ಯಾಕ್ಸಿನೇಷನ್ ಕೇಂದ್ರಕ್ಕೆ ಬರುವ ಪ್ರತಿಯೊಬ್ಬರಿಗೂ ಕರೋನಾ ಲಸಿಕೆ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಆಗ್ರಹಿಸಿದ್ದಾರೆ. ಇಂಟರ್ನೆಟ್ ಬಳಸದವರಿಗೂ ಬದುಕುವ ಹಕ್ಕಿದೆ. ಹೀಗಾಗಿ ಲಸಿಕೆಗಾಗಿ ನೋಂದಣಿ ಮಾಡದಿದ್ದವರಿಗೂ ಲಸಿಕೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಡಿಜಿಟಲ್ ಬಳಕೆ ಅಥವಾ ಸ್ಮಾರ್ಟ್ ಫೋನ್ ಇಲ್ಲದ ಬಡವರಿಗೆ, ವಿಶೇಷವಾಗಿ ದೂರದ ಮತ್ತು ಗ್ರಾಮೀಣ ಪ್ರದೇಶಗಳ ಜನರ ಪರ ಕಾಂಗ್ರೆಸ್ ಬ್ಯಾಟಿಂಗ್ ಮಾಡುತ್ತಿದೆ. ಕೋವಿಡ್ ಲಸಿಕೆ ಪಡೆಯಲು ಕೋವಿನ್ ನೋಂದಣಿ ಕಡ್ಡಾಯ ಬೇಡ ಎಂದು ವಿರೋಧ ಪಕ್ಷವೂ ಒತ್ತಾಯಿಸುತ್ತಿದೆ. ಲಸಿಕೆಗಾಗಿ ಆನ್ಲೈನ್ ನೋಂದಣಿ ಸಾಕಾಗುವುದಿಲ್ಲ. ವ್ಯಾಕ್ಸಿನೇಷನ್ ಕೇಂದ್ರಕ್ಕೆ ನೇರವಾಗಿ ಬರುವ ಪ್ರತಿಯೊಬ್ಬ ವ್ಯಕ್ತಿಯು ಲಸಿಕೆ ನೀಡಬೇಕು ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

ಶ್ರೀಲಂಕಾ ಪ್ರವಾಸಕ್ಕೆ ತಂಡ ಪ್ರಕಟ

ಮುಂಬೈ: ಶ್ರೀಲಂಕಾ ವಿರುದ್ಧದ 3 ಏಕದಿನ ಮತ್ತು 3 ಟಿ-ಟ್ವೆಂಟಿ ಪಂದ್ಯಗಳ ಸರಣಿಗೆ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಶಿಖರ್ ಧವನ್ ತಂಡವನ್ನು ಮುನ್ನಡೆಸಲಿದ್ದು, ಐಪಿಎಲ್ ಸ್ಟಾರ್, ಕನ್ನಡಿಗೆ ದೇವದತ್ ಪಡಿಕ್ಕಲ್‌ಗೆ ಸ್ಥಾನ ನೀಡಲಾಗಿದೆ. ಭುವನೇಶ್ವರ್ ಕುಮಾರ್ ಉಪನಾಯಕನಾಗಲಿದ್ದು, ಪೃಥ್ವಿ ಶಾ, ರುತುರಾಜ್ ಗಾಯಕ್ವಾಡ್, ಸೂರ್ಯಕುಮಾರ್ ಯಾದವ್, ಮನೀಷ್ ಪಾಂಡೆ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಕೃನಾಲ್ ಪಾಂಡ್ಯ, ರಾಹುಲ್ ತೆವಾಟಿಯಾ, ವಿಜಯ್ ಶಂಕರ್, ನವದೀಪ್ ಸೈನಿ, ದೀಪಕ್ ಚಹರ್, ಜಯದೇವ್ ಉನಾದ್ಕತ್, ಹರ್ಷಲ್ ಪಟೇಲ್, ವರುಣ್ ಚಕ್ರವರ್ತಿ, ಯಜ್ವೇಂದ್ರ ಚಹಾಲ್, ರಾಹುಲ್ ಚಹರ್ ಹಾಗೂ ಕುಲದೀಪ್ ಯಾದವ್ ತಂಡದಲ್ಲಿ ಇರಲಿದ್ದಾರೆ. ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾರತ ಮತ್ತು ಶ್ರೀಲಂಕಾ ನಡುವೆ 3 ಏಕದಿನ ಪಂದ್ಯಗಳು ಜುಲೈ 13, 16 ಹಾಗೂ 19ರಂದು ಮತ್ತು 3 ಟಿ-ಟ್ವೆಂಟಿ ಪಂದ್ಯಗಳು ಜುಲೈ 22, 24 ಹಾಗೂ 27ರಂದು ನಡೆಯಲಿವೆ. ತಂಡಕ್ಕೆ ವಾಲ್ ಖ್ಯಾತಿಯ ರಾಹುಲ್ ದ್ರಾವಿಡ್ ಹೆಡ್ ಕೋಚ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

ವಿಮಾನಗಳು ಪ್ರಕ್ಷುಬ್ಧತೆ (ಟರ್ಬುಲೆನ್ಸ್) ಅನುಭವಿಸದಿರಲು ಕಾರಣವೇನು ಮತ್ತು ಈ ಸಮಯದಲ್ಲಿ ನೀವು ಪಾಲಿಸಬೇಕಾದ ಒಂದಷ್ಟು ಅಂಶಗಳು ಏನೇನು ಎಂಬುದರ ಸಾರವಿದು.

ವಿಮಾನ ಗಡಗಡ ಹೃದಯ ಡವಡವ

ಮುಂಬೈನಿಂದ ಕೋಲ್ಕತ್ತಾಗೆ ಇದೇ ಸೋಮವಾರ ಹೊರಟಿದ್ದ ವಿಸ್ತಾರಾ ಸಂಸ್ಥೆಯ ಬೋಯಿಂಗ್ 737-800 ವಿಮಾನವು ಲ್ಯಾಂಡ್ ಆಗುವ ಸಂದರ್ಭದಲ್ಲಿ ತೀವ್ರ ಟರ್ಬುಲೆನ್ಸ್ ಎದುರಿಸಿದ ಪರಿಣಾಮ 8 ಪ್ರಯಾಣಿಕರು ಗಾಯಗೊಂಡಿದ್ದರು. ಇವರಲ್ಲಿ ಐವರಿಗೆ ಸಣ್ಣ-ಪುಟ್ಟ ಗಾಯಗಳೊಂದಿಗೆ ಪಾರಾದರೆ, ಉಳಿದ ಮೂವರನ್ನು ವಿಮಾನದ ಲ್ಯಾಂಡಿಂಗ್ ನಂತರ ಆಸ್ಪತ್ರೆಗೆ ಕರೆದೊಯ್ಯಲಾಯಿತು. ವಿಮಾನ ಪ್ರಾಧಿಕಾರ ಸಂಸ್ಥೆಯ ನಿರ್ದೇಶನಾಲಯವು ಇದನ್ನು ಗಂಭೀರ ಘಟನೆ ಎಂದು ಪರಿಗಣಿಸಿದೆ. ಹೀಗಾದಲ್ಲಿ, ಘಟನೆಯ ಹಿಂದಿನ ಕಾರಣವನ್ನು ಪರಿಶೀಲಿಸಲು ತನಿಖೆಗೆ ಆದೇಶಿಸಿದೆ.

ಟರ್ಬುಲೆನ್ಸ್ ಎಂದರೇನು? ಏನಾಗುತ್ತದೆ

ಪ್ರಕ್ಷುಬ್ಧತೆ ಎಂದರೆ ವಿಮಾನದ ರೆಕ್ಕೆಯ ಮೇಲೆ ಹಾದು ಹೋಗುವ ಗಾಳಿಗೆ ಉಂಟಾಗುವ ಅಡ್ಡಿ. ಇದರಿಂದ ಅನಿಯಮಿತವಾದ ಲಂಬ ಚಲನೆ ಉಂಟಾಗುತ್ತದೆ. ಅಂದರೆ, ಗಾಳಿಯಲ್ಲೇ ವಿಮಾನವೇ ನಡುಗಿದ ಅನುಭವ.

ಟರ್ಬುಲೆನ್ಸ್ ಅಪಾಯಕಾರಿಯೇ ?

ಇದು ಪ್ರಕ್ಷುಬ್ಧತೆಯ ಸ್ವಭಾವ ಮತ್ತು ತೀವ್ರತೆಯ ಮೇಲೆ ಅವಲಂಬಿತವಾಗಿದೆ. ವಿಮಾನವು ಸಾಧಾರಣವಾಗಿ ಹಲವು ರೀತಿಯ ಪ್ರಕ್ಷುಬ್ಧತೆ ಎದುರಿಸುತ್ತದೆ. ಆಗೆಲ್ಲ ಪೈಲಟ್‌ಗಳು ಇಂತಹ ಅಡಚಣೆಗಳನ್ನು ನಿಭಾಯಿಸುವಂತಹ ಪರಿಣತಿ ಹೊಂದಿರುತ್ತಾರೆ. ಇಂದಿನ ಕಾಲದಲ್ಲೂ ಪ್ರಕ್ಷುಬ್ಧತೆಯು ಆಧುನಿಕ ಜೆಟ್ ವಿಮಾ ನಗಳನ್ನು ಉರುಳಿಸುವ ಹಲವು ನಿದರ್ಶನಗಳಿವೆ. ವಿಮಾನಗಳ ಅಪಘಾತಕ್ಕೆ ಪ್ರಕ್ಷುಬ್ಧತೆಯ ತೀವ್ರತೆ ಪ್ರಮುಖ ಕಾರಣವಾದರೂ, ಇದರೊಂದಿಗೆ ಸರಿಯಾದ ತರಬೇತಿಯ ಕೊರತೆ, ಗಾಳಿ ಅಥ 'ವಾ ಹವಾಮಾನ ಪ್ರಸಾರ ಸಂಬಂಧಿತ ವಿಚಾರಗಳ ಅಸ್ಪಷ್ಟತೆಯೂ ಅವಘಡಕ್ಕೆ ಪ್ರಮುಖ ಕಾರಣವಾಗುತ್ತದೆ.

ವಿಸ್ತಾರಾ ಘಟನೆಯ ತನಿಖೆ ಸುತ್ತಮುತ್ತ

ತನಿಖೆಯ ಮಾನದಂಡವು, ಪ್ರಯಾಣಿಕರಿಗೆ ತೀವ್ರತರವಾದ ಹಾನಿಯಾಗಲು ಕಾರಣವಾದ ಘಟನೆಯ ಮೂಲವನ್ನು ಕಂಡುಹಿಡಿಯುವುದು. ಇದು ಪ್ರಕ್ಷುಬ್ಧ ತೆಯ ಎದುರಾದಾಗ ಇದ್ದಂತಹ ಹವಾಮಾನ ಸ್ಥಿತಿ, ಪೈಲಟ್‌ಗಳು ಪರಿಸ್ಥಿತಿ ಎದುರಿಸಲು ಸಜ್ಜಾಗಿದ್ದರೇ ಅಥವಾ ಇಲ್ಲವೇ ಎಂಬುದನ್ನು ಗಮನಿಸಲಿದೆ. ಪೈಲಟ್‌ಗಳು ಈ ಅಡಚಣೆ ಎದುರಿಸಲು ಸಿದ್ಧರಾಗುವಂತೆ ಕ್ಯಾಬಿನ್‌ನಲ್ಲಿ ತಿಳಿಸಿದ್ದರೇ ಅಥವಾ ಇಲ್ಲವೇ ಎಂಬ ಅಂಶಗಳಳೂ ಪ್ರಮುಖವಾಗಲಿದೆ.

ಯಾವಾಗ, ಏನಾಯಿತು?

113 ಪ್ರಯಾಣಿಕರೊಂದಿಗೆ ಹಾರುತ್ತಿದ್ದ ಬೋಯಿಂಗ್ 737-800 ವಿಮಾನವು, ಕೋಲ್ಕತ್ತಾ ದಲ್ಲಿ ಲ್ಯಾಂಡಿಂಗ್ ಆಗುವ 15 ನಿಮಿಷ ಮೊದಲು ಸುಮಾರು 15ರಿಂದ 20 ಸಾವಿರ ಅಡಿಗಳಷ್ಟು ಎತ್ತರದಲ್ಲಿ ಹಾರುತ್ತಿದ್ದ ಸಂದರ್ಭದಲ್ಲಿ ತೀವ್ರತರವಾದ ಪ್ರಕ್ಷುಬ್ಧತೆ ಎದುರಿಸಿತ್ತು.

ಟರ್ಬುಲೆನ್ಸ್‌ನಲ್ಲಿ ಪ್ರಯಾಣಿಕರೇನು ಮಾಡಬೇಕು?

ಅಮೆರಿಕ ಸಂಯುಕ್ತ ರಾಷ್ಟ್ರಗಳ ವಾಯುಯಾನ ಆಡಳಿತ ಸಂಸ್ಥೆಯು ಹೇಳುವಂತೆ, ಪ್ರಯಾಣಿಕರು ಇಂತಹ ಅನಿರೀಕ್ಷಿತ ಸಮಯದಲ್ಲಿ ಉಂಟಾಗುವ ಗಾಯಗಳನ್ನು ತಡೆಯಲು, ಪ್ರಯಾಣದ ಕೊನೆಯ ಅವಧಿಯವರೆಗೂ ಸೀಟ್ ಬೆಲ್ಟ್ ಧರಿಸಿರಬೇಕು. ಪ್ರಯಾಣಿಕರು ತಮ್ಮ ಆಸನದಲ್ಲೇ ಕುಳಿತಿರಬೇಕು ಮತ್ತು ಶೌಚಾಲಯ ಬಳಸಬಾರದು.

ಪ್ರಕ್ಷುಬ್ಧತೆ ಹೇಗೆ ತಪ್ಪಿಸಬಹುದು?

ಮಾಹಿತಿ ರವಾನಿಸುವ ವಿಧಾನ ಸುಧಾರಣೆ, ಎಲ್ಲಾ ಸಮಯದಲ್ಲೂ ಸಂಹನ ಸಂಪರ್ಕ ದಾರಿಯನ್ನು ತೆರೆದಿಡಬೇಕು. ಮುಖ್ಯವಾಗಿ ಹವಾಮಾನದಲ್ಲಿ ಉಂಟಾಗುವ ಪ್ರಕ್ಷುಬ್ಧತೆಯ ವಿವರಣೆ, ಪೈಲಟ್ ಹಾಗೂ ಮಾಹಿತಿ ರವಾನಿಸುವವ ನೇರ ಸಂಪರ್ಕದೊಂದಿಗೆ ವಿಷಯಗಳನ್ನು ಹಂಚಿಕೊಳ್ಳುವಂತೆ ಉತ್ತೇಜಿಸುವುದು, ಮಾಹಿತಿ ರವಾನೆ ಯೊಂದಿಗೆ ಪ್ರಕ್ಷುಬ್ಧತೆ ತಪ್ಪಿಸುವ ತರಬೇತಿ ಬಲಪಡಿಸುವುದು. ಸ್ವಯಂಚಾಲಿತ ವಿಚಾರ ವಿನಿಮಯ ಯಂತ್ರಗಳು, ವಾತಾವರಣದ ವಿನ್ಯಾಸ, ಮಾಹಿತಿ ವಿಶ್ಲೇಷಣೆ, ಹವಾಮಾನ ಮುನ್ಸೂಚನೆ ಸಹಿತ ಎಲ್ಲಾ ಸಂಬಂಧಿತ ದಾಖಲೆಗಳನ್ನು ಪರಿಗಣಿಸಿ ಪ್ರಯಾಣದ ಮಾರ್ಗ ಬದಲಾವಣೆ ಮಾಡಿದರೆ ಉತ್ತಮ.

ಪ್ರಯಾಣಿಕರಿಗೇನು ಸೇಫ್ಟಿ?

ವಿಮಾನ ಪ್ರಾಧಿಕಾರವು 2019ರಲ್ಲಿ ಹೊರಡಿಸಿದ, ವಿಮಾನ ಪ್ರಯಾಣಿಕರ ಹಕ್ಕುಗಳ ಪ್ರಕಾರ, ದೇಶೀಯ ವಿಮಾನಗಳಲ್ಲಿನ ಪ್ರಯಾಣಿಕರ ಮರಣ ಅಥವಾ ತೀವ್ರವಾದ ಗಾಯಗಳಿಗೆ ವಿಮಾನ ಸಂಸ್ಥೆಯು 20 ಲಕ್ಷದವರೆಗೆ ಪರಿಹಾರ ನೀಡುವ ಹೊಣೆಗಾರಿಕೆ ಇರಲಿದೆ.

ವಿಮಾನವು ಏನಿಲ್ಲವೆಂದರೂ 7 ವಿವಿಧ ರೀತಿಯ ಪ್ರಕ್ಷುಬ್ಧತೆಯನ್ನು ಎದುರಿಸುತ್ತದೆ.

- ಹವಾಮಾನ ಸಂಬಂಧಿತವಾದರೆ ಗುಡುಗು ಅಥವಾ ವಿಪರೀತ ಮೋಡದ ನಡುವೆ ಹಾದು ಹೋಗುವಾಗ ಟರ್ಬುಲೆನ್ಸ್ ಉಂಟಾಗಲಿದೆ. ವಿಮಾನದ ಎಂಜಿನ್‌ನಿಂದ ಹೊರಬರುವ ಅನಿಲಧಾರೆ ಅಥವಾ ಗಾಳಿಯಿಂದ ಪ್ರಕ್ಷುಬ್ಧತೆ ಉಂಟಾಗುತ್ತದೆ.
- ರೆಕ್ಕೆಗಳು ಗಾಳಿಯನ್ನು ಸೀಳಿಕೊಂಡು ಹಾರುವಾಗ ವಿಮಾನದ ಹಿಂಬದಿಯಲ್ಲಿ ಗಾಳಿಯ ಸುಳಿಗಳಿಂದ ಉಂಟಾಗುವುದು.

ಜಿಲ್ಲೆಗಳಲ್ಲಿ ಕರೋನಾ ಸೋಂಕು ಇಳಿಮುಖ, ಲೆಕ್ಕ ಪಕ್ಕಾ ಇಲ್ಲ!

ಕಲ್ಪತರು ನಾಡಲ್ಲಿ ಕರೋನಾ ಇಳಿಕೆ

ತುಮಕೂರು: ಜಿಲ್ಲೆಯಲ್ಲಿ ಕರೋನಾ 2ನೇ ಅಲೆ ಸಂಪೂರ್ಣವಾಗಿ ಕುಗ್ಗಿದೆ. ಜಿಲ್ಲೆಯಲ್ಲಿ ಕಳೆದ ಮೂರು ದಿನಗಳಿಂದ ಪಾಸಿಟಿಟಿ ಪ್ರಮಾಣ ಶೇ. 10 ರಿಂದ 13ರೊಳಗೆ ವರದಿಯಾಗುತ್ತಿದೆ.

ಶಿರಾ ಮತ್ತು ತಿಪಟೂರು ತಾಲೂಕುಗಳಲ್ಲಿ ಶೇ.15 ಕ್ಕಿಂತ ಹೆಚ್ಚು ವರದಿಯಾಗುತ್ತಿದೆ. ಉಳಿದ ಎಲ್ಲಾ ತಾಲೂಕುಗಳಲ್ಲಿಯೂ 15ಕ್ಕಿಂತ ಕಡಿಮೆ ಬರುತ್ತಿದೆ. ಪ್ರತಿನಿತ್ಯ ಪರೀಕ್ಷೆ ಪ್ರಮಾಣ ಹೆಚ್ಚಾಗಿ ನಡೆಸಲಾಗು ತ್ತಿದ್ದು ಸುಮಾರು 38 ಸಾರದಷ್ಟು ಮೆಡಿಸಿನ್ ಕಿಟ್ ತಯಾರು ಮಾಡಿಕೊಂಡು ಸೋಂಕು ಕಂಡುಬಂದ ತಕ್ಷಣವೇ ಸೋಂಕಿತರಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ 220 ಕ್ಕೂ ಹೆಚ್ಚು ಆಮ್ಲಜನಕ ಹಾಸಿಗೆಗಳು ಖಾಲಿಯಿದ್ದು, 2ನೇ ಅಲೆ ಇಳಿಮುಖವಾಗಿದೆ. ಜಿಲ್ಲೆಯಲ್ಲಿ ಸಾವಿನ ಪ್ರಮಾಣ 2ನೇ ಅಲೆಯಲ್ಲಿ ಅಧಿಕಗೊಂಡಿದೆ. ಆರೋಗ್ಯ ಇಲಾಖೆ ಸಾವಿನ ಲೆಕ್ಕವನ್ನು ಸಂಪೂರ್ಣವಾಗಿ ಮರೆಮಾಚಿದೆ. ಬೆಡ್, ಆಕ್ಸಿಜನ್, ಐಸಿಯು, ಸರಿಯಾದ ಸಮಯಕ್ಕೆ ಆಂಬ್ಯುಲೆನ್ಸ್ ಸಿಗದೆ ಸತ್ತವರ ಪ್ರಮಾಣ ಕಳೆದ ಒಂದು ತಿಂಗಳಿನಿಂದ ಲೆಕ್ಕಕ್ಕೆ ಸಿಕ್ಕಿಲ್ಲ. ಆಕ್ಸಿಜನ್, ಐಸಿಯು ಬೆಡ್ ಸಿಗದೇ ಮೃತಪಟ್ಟವರು ಒಂದೆಡೆಯಾದರೆ ಐಸಿಯುನಲ್ಲಿ ಚಿಕಿತ್ಸೆ ಪಡೆದ ಶೆ.60 ರಿಂದ 70 ರಷ್ಟು ಸೋಂಕಿತರು ಮರಣ ಹೊಂದಿರುವುದು ಜನತೆಯಲ್ಲಿ ಆತಂಕ ಮೂಡಿಸಿದೆ.

3ನೇ ಅಲೆಗೆ ತುಮಕೂರು ಸಜ್ಜು

2ನೇ ಅಲೆಯಲ್ಲಿ ಸಾಕಷ್ಟು ಸಾವು, ನೋವುಗಳು ವರದಿಯಾದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಆರೋಗ್ಯ ಇಲಾಖೆ ಎಚ್ಚೆತ್ತು ಕೊಂಡಿದ್ದು, 3ನೇ ಅಲೆಯನ್ನು ಸಮರ್ಪಕವಾಗಿ ಎದುರಿಸಲು ಸಜ್ಜಾಗಿದೆ. ಜಿಲ್ಲೆಯಲ್ಲಿ 16, ಸರಕಾರಿ ಮತ್ತು ಖಾಸಗಿ ಸೇರಿ ದಂತೆ ಸುಮಾರು 60ಕ್ಕೂ ಹೆಚ್ಚು ಶಿಶು ವೈದ್ಯರಿ ದ್ದು, ಎಲ್ಲಾ ತಾಲೂಕುಗಳಲ್ಲಿಯೂ ಶಿಶುವೈದ್ಯರ ವ್ಯವಸ್ಥೆ ಮಾಡಲು ಸಿದ್ಧರಾಗಿದ್ದೇವೆ. ಈಗಾಗಲೇ ಗುರುತಿಸಿರುವ ಸುಮಾರು 8,000 ಮಕ್ಕಳು ಅಪೌಷ್ಟಿಕತೆ ಹೊಂದಿರುವ ಮಕ್ಕಳ ಮನೆಗಳ ಪೋಷಕರಿಗೆ ತಿಳಿವಳಿಕೆ ನೀಡಲು ಆರೋಗ್ಯ ಹಾಗೂ ಮಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸೂಚಿಸಲು ನಿರ್ಧಾರ ಮಾಡಲಾಗಿದೆ. ಅಪೌಷ್ಟಿಕ ಮಕ್ಕಳಿಗೆ ಕಿಟ್ ತಯಾರು ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 3,600 ಹಾಸಿಗೆ ಗಳಿವೆ. ಈ ಪೈಕಿ 528 ಹಾಸಿಗೆಗ ಳನ್ನು ಪಿಡಿಯಾಟ್ರಿಕ್ ಹಾಸಿಗೆಗಳಿ ಗೆ ಮೀಸಲಿಡಲಾಗಿದೆ. ಇದರಲ್ಲಿ ರುವ 118 ಸರಕಾರಿ ಹಾಸಿಗೆಗ ಳನ್ನು 180ಕ್ಕೆ ಹೆಚ್ಚಿಸಲಾಗುವುದು.

- ವೈ.ಎಸ್. ಪಾಟೀಲ್ ಜಿಲ್ಲಾಧಿಕಾರಿ

ಚಾಮರಾಜನಗರದಲ್ಲಿ ಗೋಳಿಡುತ್ತಿದ್ದ ಮೃತರ ಸಂಬಂಧಿಕರು.

ಕೋವಿಡ್ ಮೊದಲ ಅಲೆಗೆ ತತ್ತರಿಸಿದ್ದ ರಾಜ್ಯಕ್ಕೆ 2ನೇ ಅಲೆಯೂ ಭೀಕರವಾಗಿ ಕಾಡುತ್ತಿದೆ. ಈ ನಡುವೆ ಲಾಕ್‌ಡೌನ್ ಆಗಿದ್ದರಿಂದ ಸೋಂಕಿತರ ಸಂಖ್ಯೆ ಇಳಿಮುಖವಾಗುತ್ತಿದೆ. ಕೆಲ ಜಿಲ್ಲೆಗಳ ಪ್ರಮುಖಾಂಶಗಳು ಇಲ್ಲಿವೆ. ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗಲಿ ಎಂದು ಅಧಿಕಾರಿಗಳು ಕರೋನಾ ಪರೀಕ್ಷೆಯನ್ನೂ ಕಡಿಮೆ ಮಾಡಿದ್ದಾರೆ ಎನ್ನುವ ಆರೋಪವೂ ಇದೆ

ಕೊಡಗಿನಲ್ಲಿ ಕೋವಿಡ್‌ನಿಂದ ಮೃತರಾದವರ ಸಂಖ್ಯೆ ಶೂನ್ಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಸುಮಾರು 3 ತಿಂಗಳ ಬಳಿಕ ಕೋವಿಡ್‌ನಿಂದ ಸಾವನ್ನಪ್ಪಿದವರ ಸಂಖ್ಯೆ ಶೂನ್ಯಕ್ಕೆ ತಲುಪಿದೆ.

ಕೊಡಗು ಜಿಲ್ಲೆಯಲ್ಲಿ ಬುಧವಾರ ಕೋವಿಡ್ ಸೋಂಕು ಪ್ರಕರಣ ವರದಿಯಾಗಿದ್ದು ಕಳೆದ 24 ಗಂಟೆಗಳಲ್ಲಿ ಸೋಂಕಿನಿಂದ ಯಾರೊಬ್ಬರೂ ಮರಣ ಹೊಂದಿಲ್ಲ. ಕಳೆದ 3 ತಿಂಗಳಿನಿಂದ ಜಿಲ್ಲೆಯಲ್ಲಿ ಸೋಂಕಿನಿಂದಾಗಿ ಮತಪಟ್ಟವರ ಸಂಖ್ಯೆ ಹೆಚ್ಚುತ್ತಲೇ ಇದ್ದು ಕಳವಳಕ್ಕೆ ಕಾರಣವಾಗಿತ್ತು. ಆದರೆ ಬುಧವಾರ ಯಾರೊಬ್ಬರೂ ಮರಣ ಹೊಂದಿಲ್ಲ. ಇದು ನೆಮ್ಮದಿ ತಂದಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಹೇಳಿದರು. ಜಿಲ್ಲೆಯಲ್ಲಿ ಕೋವಿಡ್ ನಿಂದಾಗಿ ಈವರೆಗೆ 341 ಮಂದಿ ಸಾವನ್ನಪ್ಪಿದ್ದಾರೆ. ಪ್ರಸ್ತುತ ಕೊಡಗಿನಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ 1979 ಸಂಖ್ಯೆ ಇದ್ದು, ಈವರೆಗೆ ಜಿಲ್ಲೆಯಲ್ಲಿ 26,521 ಸೋಂಕು ತಗುಲಿದೆ. ಜಿಲ್ಲೆಯಲ್ಲಿ ಪಾಸಿಟಿವಿಟಿ ದರ ಶೇ. 8 ರಷ್ಟಿದೆ ಎಂದೂ ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಕಳೆದ ವರ್ಷ ಕರೋನಾ ಪ್ರಕರಣ ವರದಿಯಾದಲ್ಲಿಂದ ಕೊಡಗಿನಲ್ಲಿ ಏಪ್ರಿಲ್ ಅಂತ್ಯದವರೆಗೆ ವರದಿಯಾದ ಮರಣ ಪ್ರಕರಣ 90. ಆದರೆ, ಆ 13 ತಿಂಗಳಲ್ಲಿ ವರದಿಯಾದ ಸಾವಿನ ಸಂಖ್ಯೆಯನ್ನು ಮೇ ಒಂದೇ ಒಂದು ತಿಂಗಳು ಹಿಂದಿಕ್ಕಿದ್ದು ಮಾತ್ರವಲ್ಲ 13 ತಿಂಗಳ ಲೆಕ್ಕವನ್ನೇ ಮರಣ ಸಂಖ್ಯೆಯಲ್ಲಿ ದುಪ್ಪಟ್ಟು ಮಾಡಿತ್ತು. ಮೇ ತಿಂಗಳೊಂದರಲ್ಲಿಯೇ ಕೊಡಗಿನಲ್ಲಿ ಒಟ್ಟು 13,143 ಸೋಂಕಿನ ಸಂಖ್ಯೆ ವರದಿಯಾಗಿದ್ದು 207 ಸಾವಿನ ಸಂಖ್ಯೆ ವರದಿಯಾಗಿತ್ತು. ಇದು ಕರೋನಾ ಎರಡನೇ ಅಲೆಯ ತೀವ್ರತೆಗೆ ಸಾಕ್ಷಿಯಾಗಿದೆ. ಲಾಕ್‌ಡೌನ್ ಮಾಡದೇ ಹೋಗಿದ್ದಲ್ಲಿ ಕರೋನಾ ಸೋಂಕಿನ ಸಂಖ್ಯೆ ನಾಲ್ಕು ಪಟ್ಟು ಹೆಚ್ಚುತ್ತಿತ್ತಲ್ಲದೇ ಸಾವಿನ ಸಂಖ್ಯೆಯೂ ತೀವ್ರರೀತಿಯಲ್ಲಿ ಏರಿಕೆಯಾಗುತ್ತಿತ್ತು ಎಂದು ವೈದ್ಯಕೀಯ ತಜ್ಞರ ಅಭಿಪ್ರಾಯ.

ಕೋಲಾರ ಸೋಂಕು ತಹಬಂದಿಗೆ ಬಂದಿದ್ದರೂ ನಿಂತಿಲ್ಲ ಭೀತಿ

ಕೋಲಾರ: 2020 ಮೇ 12ರಿಂದ ಈವರೆಗೆ ಜಿಲ್ಲೆಯಲ್ಲಿ 41,639 ಕರೋನಾ ಪಾಸಿಟಿವ್ ಪ್ರಕರಣಗಳು ಕಂಡು ಬಂದಿದ್ದು 37,769 ಮಂದಿ ಗುಣಮುಖರಾಗಿದ್ದಾರೆ.

ಪ್ರಸ್ತುತ 3,436 ಸಕ್ರೀಯ ಕೇಸ್‌ಗಳಿದ್ದು 55 ಮಂದಿ ಐಸಿಯುನಲ್ಲಿದ್ದಾರೆ. ಕಳೆದ ಒಂದು ವರ್ಷದಲ್ಲಿ ಕೋವಿಡ್‌ನಿಂದಾಗಿ ಜಿಲ್ಲೆಯಲ್ಲಿ 434 ಜನ ಕೊನೆಯುಸಿರೆಳಿದಿದ್ದಾರೆ. ಡಿಸೆಂಬರ್‌ನಲ್ಲಿ 366 ಕರೋನಾ ಕೇಸ್‌ಗಳಿದ್ದು ಜನವರಿಯಲ್ಲಿ 128 ಕ್ಕೆ ಇಳಿಮುಖ ಆಗಿತ್ತು. ಫೆಬ್ರವರಿಯಲ್ಲಿ 248ಕ್ಕೆ ಏರಿಕೆಯಾಗಿದ್ದು ನಂತರದಲ್ಲಿ ಸೋಂಕು ನಿರಂತರವಾಗಿ ಮೇಲ್ಮುಖವಾಗಿತ್ತು. ಮಾರ್ಚ್‌ನಲ್ಲಿ 3,734, ಏಪ್ರಿಲ್‌ನಲ್ಲಿ 16,389, ಮೇನಲ್ಲಿ 11,360 ಪಾಸಿಟಿವ್ ಆಗಿದೆ.

ಕೋಲಾರ ಜಿಲ್ಲೆಯು ಆಂಧ್ರ ಮತ್ತು ತಮಿಳುನಾಡು ಗಡಿಗೆ ಅಂಟಿಕೊಂಡಿರುವುದರಿಂದಾಗಿ ಅಂತಾರಾಜ್ಯಕ್ಕೆ ಜನಸಂಚಾರ ಸಾಮಾನ್ಯ. ಪ್ರತಿದಿನ ಚೆನ್ನೈ ಮಾರುಕಟ್ಟೆಗೆ ತರಕಾರಿ ಹೋಗುವುದರಿಂದಾಗಿ ಸೋಂಕನ್ನು ಹತ್ತಿಸಿಕೊಂಡು ಬರುವುದೂ ಮಾಮೂಲು. ಇದೇ ಕಾರಣಕ್ಕಾಗಿ ಘಟ್ಟ ಮಾದಮಂ ಗಲದ ಒಂದೇ ಕುಟುಂಬದ 13 ಮಕ್ಕಳು ಪಾಸಿಟಿವ್ ಆಗಿದ್ದರು. ಲಾಕ್‌ಡೌನ್‌ನಿಂದಾಗಿ ಸೋಂಕು ತಹಬಂದಿಗೆ ಬಂದಿದ್ದರೂ ಈಗಲೂ ಪಾಸಿಟಿವಿಟಿ ಪ್ರಮಾಣ ಶೇ.7.72 ಇದ್ದು ಸಾವಿನ ಸಂಖ್ಯೆ ಶೇ.1.03 ರಲ್ಲಿದೆ ಎಂದು ಕೋವಿಡ್ ನೋಡಲ್ ಅಧಿಕಾರಿ ಡಾ.ಚಂದನ್‌ಕುಮಾರ್ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಗೆ ಕರೋನಾ ಕಾಟ

- ಮೊದಲನೇ ಅಲೆಯಲ್ಲಿ ಬರೋಬ್ಬರಿ 3 ತಿಂಗಳ ಕಾಲ ಹಸಿರು ವಲಯದಲ್ಲಿದ್ದ ಚಾಮರಾಜನಗರ ಎರಡನೇ ಅಲೆಗೆ ತತ್ತರಿಸುತ್ತಿದೆ.
- 7 ತಿಂಗಳ ಬಳಿಕ ಚಾಮರಾಜನಗರದಲ್ಲಿ ಜನವರಿ ತಿಂಗಳಿನಲ್ಲಿ ಶೂನ್ಯ ಕರೋನಾ ಕೇಸ್ ವರದಿಯಾಗಿತ್ತು. ಆದರೆ,ದಿನ ಉರುಳಿದಂತೆ ಕರೋನಾ ಕೇಸ್ 3 ಅಂಕಿಗಳಲ್ಲಿ ಕಾಣಿಸಿಕೊಳ್ಳಲು ಆರಂಭಿಸಿತು.
- ಜಿಲ್ಲಾಡಳಿತವು ಕರೋನಾ ನಿರ್ವಹಣೆಯಲ್ಲಿ ಈ ಬಾರಿ ಸಂಪೂರ್ಣ ವಿಫಲ ಕಂಡಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಅಂಕಿ ಇಲ್ಲ.
- ಎರಡನೇ ಡೋಸ್ ಪಡೆದ 7 ಮಂದಿ ವೈದ್ಯರಿಗೆ ಕರೋನಾ ಬಂದಿದ್ದು ಸುದ್ದಿಯಾಗಿತ್ತು.
- ಡಿಸಿ ಡಾ.ರವಿ, ಶಾಸಕ ಪುಟ್ಟರಂಗಶೆಟ್ಟಿ, ನಿರಂಜನಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಸುರೇಶ್ ಕುಮಾರ್ ಅವರಿಗೂ ಕರೋನಾ ದೃಢ.
- ರಾಜ್ಯದಲ್ಲೇ ಮೊದಲ ಬಾರಿಗೆ ಜಾಗೃತಿಗಾಗಿ ಸುರಕ್ಷಾ ಪಡೆ ರಚನೆ, ಕೊರೋನಾ ವಾರಿಯರ್ಸ್‌ಗಾಗಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಕೂಡ ಸ್ಥಾಪನೆ.
- ಆ್ಯಕ್ಸಿಜನ್ ಪೂರೈಕೆ ಕೊರತೆಯಿಂದ ಒಂದೇ ರಾತ್ರಿ 24 ಸಾವು, ಆರಂಭದಲ್ಲಿ ಮೂರು ತನಿಖಾ ಸಂಸ್ಥೆಗಳಿಂದ ತನಿಖೆ ಈಗ ಎರಡು ತಂಡಗಳಿಂದ ತನಿಖೆ
- ಸದ್ಯ, 15 ದಿನಗಳಿಂದ ಕರೋನಾ ಇಳಿಕೆ, ಸಾವಿನ ಪ್ರಮಾಣವೂ ಕಡಿಮೆಯಾಗಿದೆ.

ಪ್ರಕರಣ ಕಡಿಮೆಯಾಗುತ್ತಿವೆ, ಜತೆಗೆ ಟೆಸ್ಟ್ ಕೂಡ!

ಮಂಡ್ಯ: ಜಿಲ್ಲೆಯಲ್ಲಿ ಕರೋನಾ ಪಾಸಿಟಿವ್ ಪ್ರಮಾಣ ಇಳಿಕೆಯಾಗಿದೆ. ಇದಕ್ಕೆ ಲಾಕ್‌ಡೌನ್ ಎಫೆಕ್ಟ್ ಕಾರಣವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಧನಂಜಯ್ ತಿಳಿಸಿದರು.

ವಿಶ್ವವಾಣಿಯೊಂದಿಗೆ ಮಾತನಾಡಿದ ಅವರು, ಕಳೆದ ಎರಡ್ಮೂರು ತಿಂಗಳ ಹಿಂದಿನ ರಿಪೋರ್ಟ್‌ಗೂ ಪ್ರಸ್ತುತದ ರಿಪೋರ್ಟ್‌ಗೂ ತಾಳೆ ಮಾಡೋದಾದರೆ ತುಂಬಾ ಅಂತರವಿರದೆ, ಕಳೆದ ಒಂದೂವರೆ ತಿಂಗಳ ಹಿಂದೆ ಶೇ.31ರಿಂದ 32ರಷ್ಟು ಅಂದರೆ ನಿತ್ಯವೂ 1,900ರಷ್ಟು ಪಾಸಿಟಿವ್ ಪ್ರಕರಣಗಳು ಪತ್ತೆಯಾಗುತ್ತಿದ್ದವು. ಆದರೆ, ಇದೀಗ ಕೇವಲ ಶೇ.14 ರಷ್ಟು ಅಂದರೆ 300ರಿಂದ 400 ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ ಎಂದರು.

ಇಡೀ ಜಿಲ್ಲಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಕೋವಿಡ್ ಟೆಸ್ಟಿಂಗ್ ಕೇಂದ್ರಗಳನ್ನು ತೆರೆಯಲಾಗಿತ್ತು. 4 ಮೊಬೈಲ್ ತಂಡಗಳನ್ನು ರಚಿಸಲಾಗಿತ್ತು. ಇದು ಪ್ರತಿ ತಾಲೂಕಿನಲ್ಲಿಯೂ ಕೆಲಸ ಮಾಡುತ್ತಿದೆ. ಸುಮಾರು 116 ಪ್ರಾಥಮಿಕ ಆರೋಗ್ಯಕೇಂದ್ರ, 10 ಸಮುದಾಯ ಕೇಂದ್ರ, 6 ತಾಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಕೇಂದ್ರದ ಸರ್ಕಾರಿ (ಮಿಮ್ಸ್) ಆಸ್ಪತ್ರೆಯನ್ನು ಸಹ ಕೋವಿಡ್ ಚಿಕಿತ್ಸಾ ಹಾಗೂ ಟೆಸ್ಟಿಂಗ್ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿತ್ತು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶ್ರೀಧರ್ ತಿಳಿಸಿದರು.

ಲಾಕ್‌ಡೌನ್ ವರ್ಕ್‌ಔಟ್: ಕರೋನಾ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ಮಾಡಿದ್ದ ಮೊದಲ ಪ್ಲಾನ್‌ನಂತೆಯೇ ನಿತ್ಯವೂ 4.500 ರಿಂದ 5000 ಮಂದಿಯ ತಪಾಸಣೆ ಮಾಡಲಾಗುತ್ತಿತ್ತು. ಪ್ರಸ್ತುತ ಕೂಡ ಅಷ್ಟೇ ಪ್ರಮಾಣದಲ್ಲಿಯೇ ತಪಾಸಣೆ ನಡೆಸಲಾಗುತ್ತಿದೆ, ಕರೋನಾ ನಿಯಂತ್ರಣಕ್ಕೆ ಸರಕಾರದ ನಿರ್ದೇಶನದಂತೆಯೇ ಜಿಲ್ಲಾಡಳಿತ ಕೈಗೊಂಡ ಲಾಕ್‌ಡೌನ್ ಕ್ರಮ ಜಿಲ್ಲೆಯಲ್ಲಿ ವರ್ಕ್‌ಔಟ್ ಆಗಿದೆ. ಕರೋನಾ ಪಾಸಿಟಿವ್ ಪ್ರಮಾಣ ಇಳಿಕೆಯಾಗಿದೆ ಎಂದರು.

SAMPLE COLLECTION KIOSKS
WASH YOUR HANDS
& KEEP CLEAN
ನಿಮ್ಮ ಕೈಗಳನ್ನು ತೊಳೆಯಿರಿ
ಮತ್ತು ಸ್ವಚ್ಛವಾಗಿ ಇರಿಸಿ

ಮಂಡ್ಯದಲ್ಲಿ ಖಾಲಿ ಬಿದ್ದಿರುವ ಪರೀಕ್ಷಾ ಕೇಂದ್ರ.

ಬಹುತೇಕ ಕಡೆ ಟೆಸ್ಟಿಂಗ್ ನಡೆಯುತ್ತಿಲ್ಲ!

ಕರೋನಾ ಮೊದಲ ಅಲೆಯ ಸಂದರ್ಭದಲ್ಲಿ ಕೈಗೊಂಡಷ್ಟು ಪರಿಣಾಮಕಾರಿಯಾಗಿ ಎರಡನೇ ಬಾರಿಗೆ ಮಾಡಲಾಗಿರುವ ಲಾಕ್‌ಡೌನ್ ಜಾರಿಯಾಗಿಲ್ಲ. ಪೊಲೀಸರು ಬಿಗಿ ಕ್ರಮಕೈಗೊಂಡಿಲ್ಲ. ಆರೋಗ್ಯ ಇಲಾಖೆಯೂ ಸಹ ಹಳ್ಳಿಹಳ್ಳಿಗಳಲ್ಲೂ ತಪಾಸಣೆ ಮಾಡುತ್ತಿಲ್ಲ. ಸೋಂಕು ಕಾಣಿಸಿಕೊಂಡವರಿಗೆ ಮಾತ್ರವಲ್ಲ, ಮುಂಜಾಗೃತಾ ಕ್ರಮವಾಗಿ ಚಿಕಿತ್ಸೆ ಬಯಸಿದವರಿಗೂ ವ್ಯಾಕ್ಸೀನೇಷನ್ ಮಾಡುತ್ತಿಲ್ಲ. ಆಕ್ಸಿಜನ್, ವೆಂಟಿಲೇಟರ್ ಸೌಲಭ್ಯವನ್ನೇ ಕಲ್ಪಿಸಿಕೊಡುತ್ತಿಲ್ಲ, ಕಳೆದ ಎರಡು ವಾರದಿಂದೀಚೆಗೆ ವ್ಯಾಕ್ಸೀನೇಷನ್ ನೀಡೋದನ್ನೇ ನಿಲ್ಲಿಸಲಾಗಿದೆ. ಕರೋನಾ ವಾರಿಯರ್ಸ್‌ಗೆ ಮಾತ್ರ ವಾಕ್ಸೀನ್ ನೀಡಲಾಗುತ್ತಿದೆ. ಸಾಮಾನ್ಯರ ಜನರಿಗೆ ಚಿಕಿತ್ಸೆಯೇ ಸಿಗುತ್ತಿಲ್ಲ. ಅಧಿಕಾರಿಗಳು ದಾಖಲೆಗಳನ್ನಷ್ಟೇ ಸೃಷ್ಟಿಸಿಕೊಳ್ಳುತ್ತಿದ್ದಾರೆ ಎನ್ನುವುದು ಸಾರ್ವಜನಿಕ ವಲದ ಆರೋಪ.